ದಿನಾಂಕ : 28.03.2023 ರಂದು ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.

<u>ಪಾಟೀ ಸ ವಾಲು : ವಾದಿ ಪ**ರವಾಗಿ ಶ್ರೀ** ಆರ್ ಎಸ್ **ವಕೀಲರಿಂದ,**</u>

ನಾನು ಹಾಲ್ದಳ್ಳಿಯಲ್ಲಿ ವಾಸ ಮಾಡುತ್ತಿದ್ದೇನೆ. ಹಾಲ್ದಳ್ಳಿಯಿಂದ ಬಂಡಿಹಟ್ಟಿಯ ನಡುವೆ ಅಂದಾಜು 1 ಕಿ. ಮೀ. ಅಂತರವಿದೆ. ನನ್ನ ಜಮೀನಿನ ಸರ್ವೆ ನಂಬರ್ 715 ಆಗಿದ್ದು ಒಟ್ಟು 90 ಸೆಂಟ್ಸ್ ಇದೆ. ಸರ್ವೆ ನಂಬರ್ 715 ರಲ್ಲಿ ಅಂದಾಜು 1000 ಸಾವಿರ ಎಕರೆ ಜಮೀನು ಇದ್ದು ಅದರಲ್ಲಿ ನನ್ನ ಜಮೀನು 90 ಸೆಂಟ್ಸ ಇದೆ. ಸದರಿ ಜಮೀನು ನನ್ನ ತಂದೆಗೆ ಸೇರಿದ್ದು ಮೊದಲಿನಿಂದಲೂ ಪಟ್ಟ ನಮ್ಮ ಕುಟುಂಬದವರ ಹೆಸರಿಗೆ ಇದೆ. ನನ್ನ ತಂದೆ ತಾಲೂಕು ಕಛೇರಿಯಲ್ಲಿ ಸದರಿ ಜಮೀನಿನ ಬಾಬ್ತು ಅರ್ಜಿಯನ್ನು ಕೊಟ್ಟಿರುತ್ತಾರೆ. ಸದರಿ ಜಮೀನು ನಮ್ಮ ಹೆಸರಿಗೆ ಆಗಬೇಕು ಎಂದು ನನ್ನ ತಂದೆ ಅರ್ಜಿಯನ್ನುದಾಖಲು ಮಾಡಿದ್ದನು. ಸದರಿ ಅರ್ಜಿಯಲ್ಲಿ ನಾವು ಇದ್ದ ಜಮೀನಿನ ಚೆಕ್ಕು ಬಂದಿಯನ್ನು ಹಾಜರು ಮಾಡಿದ್ದೇವೆ. ಸದರಿ ಅರ್ಜಿಯ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ತಾಲೂಕು ಕಛೆರಿಯಲ್ಲಿ ನಾವು ಕೊಟ್ಟ ಅರ್ಜಿಯಂತೆ ಆದೇಶವಾಗಿರುತ್ತದೆ. ತಾಲೂಕು ಕಛೇರಿಯಲ್ಲಿ ಜಮೀನಿನ ಪಟ್ಟ ನಮ್ಮ ಹೆಸರಿಗೆ ಆದ ಬಾಬ್ತು ದಾಖಲೆಯನ್ನು ಹಾಜರು ಮಾಡಿದ್ದೇನೆ. 90 ಸೆಂಟ್ಸ್ ಜಮೀನಿಗೆ ಸಂಬಂಧಿಸಿದಂತೆ ಅಳತೆಯನ್ನು ಮಾಡಿ ಬಾಂದುಗಲ್ ನು ಹಾಕಿರುತ್ತಾರೆ. ತದನಂತರ 90 ಸೆಂಟ್ಸ್ ಜಮೀನಿಗೆ ಸಂಬಂಧಿಸಿದಂತೆ ನಕ್ಷೆಯನ್ನು ಕೊಟ್ಟಿರುತ್ತಾರೆ. ಸದರಿ ನಕ್ಷೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ಸರ್ವೆ ಮಾಡುವಾಗ ಆಜುಬಾಜುದವರಿಗೆ ನೊಟೀಸ್ ಕೊಟ್ಟಿರುವುದಿಲ್ಲ ಆದರೆ ನನಗೂ ಮತ್ತು ನನ್ನ ತಂದೆಗೆ ನೋಟಿಸ್ ಕೊಟ್ಟಿದ್ದರು, ಸದರಿ ನೋಟಿಸ್ ನ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ.

ವಾದಿ ಹನುಮಂತಪ್ಪ ನನ್ನ ಚಿಕ್ಕಪ್ಪನ ಮಗನಾಗಿರುತ್ತಾನೆ. ನನ್ನ ಚಿಕ್ಕಪ್ಪನ ಹೆಸರು ಕಲ್ಲಪ್ಪ. ನನ್ನ ಚಿಕ್ಕಪ್ಪನನ್ನು ಕುರುಬರ ಕಲ್ಲಪ್ಪ ಎಂದು ಸಹ ಕರೆಯುತ್ತಾರೆ ಎಂದರೆ ನಿಜ. ಕಲ್ಲಪ್ಪ ನವರಿಗೂ ಸಹ ಅರ್ಜಿಯನ್ನು ದಾಖಲು ಮಾಡಿದ್ದು ಅವರಿಗೂ ಸಹ ಜಮೀನನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ 13 ಎಕರೆ ಜಮೀನು ಕೊಟ್ಟಿರುತ್ತಾರೆ ಎನ್ನುತ್ತಾರೆ.

ಡಿ

ಡಬ್ಲ್ಯೂ : 1

**(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಆಲಿಸಿ ನೀಡಲಾಯಿತು.)**

*(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)*

ಓ ಹೇ ಕೇ ಸರಿ ಇದೆ

**2 ನೇ ಹೆ ಹಿ ಸಿವಿಲ್ ಜಡ್ಜ್, ಬಳ್ಳಾರಿ**